

# ನಮ್ಮ ನಾಡ ಗುಡಿಯ ಬಣ್ಣ ನೋಡಿರಣ್ಣ ಹೀಗಿದೆ...

■ ಚಿತ್ರಪಟ: **ತಾಜುದ್ದೀನ್ ಆಜಾದ್**
■ ಟಿಪ್ಪಣಿ: **ಇ.ಎಸ್. ಸುಧೀಂದ್ರ ಪ್ರಸಾದ್**

ಸ್ವಾತಂತ್ರ್ಯ ದಿನಾಚರಣೆ ಹಾಗೂ ಗಣರಾಜ್ಯೋತ್ಸವ ಸಂದರ್ಭದಲ್ಲಿ ಕರ್ನಾಟಕದ ಎರಡು ಗ್ರಾಮಗಳಲ್ಲಿ ವಿಪರೀತ ಚಟುವಟಿಕೆ. ಅಲ್ಲಿ ಗರಿಗೆದರುವ ದೇಶಪ್ರೇಮದ ಬಣ್ಣಗಳು ನಾಡಿನಲ್ಲಿ ಮಾತ್ರವಲ್ಲ – ಇಡೀ ದೇಶವನ್ನು ಆವರಿಸಿಕೊಳ್ಳುತ್ತವೆ. ಆ ಗ್ರಾಮಗಳೇ ಧಾರವಾಡ ಜಿಲ್ಲೆಯ ಬೆಂಗೇರಿ ಹಾಗೂ ಗರಗ.

ಬೆಂಗೇರಿ ಹಾಗೂ ಗರಗ ಗ್ರಾಮಗಳಲ್ಲಿ ಖಾದಿ ಗ್ರಾಮೋದ್ಯೋಗ ಸಂಘಗಳು ಇಡೀ ದೇಶಕ್ಕೆ ರಾಷ್ಟ್ರಧ್ವಜವನ್ನು ಪೂರೈಸುತ್ತವೆ. ಭಾರತ ಸರ್ಕಾರದಿಂದ ಅಧಿಕೃತ ಮಾನ್ಯತೆಯನ್ನು ಪಡೆದಿರುವ ಖಾದಿ ಗ್ರಾಮೋದ್ಯೋಗ ಸಂಘ ಸಂಸ್ಥೆಯಲ್ಲಿ ವರ್ಷವಿಡೀ ಚಟುವಟಿಕೆ ನಡೆದರೂ – ದೇಶದ ಹಬ್ಬಗಳ ಸಂದರ್ಭದಲ್ಲಿ ವಿಶೇಷ ಸಂಭ್ರಮ ತುಂಬಿಕೊಳ್ಳುತ್ತದೆ.



ಸ್ವಾತಂತ್ರ್ಯದ ರೂಪಕವಾದ ರಾಷ್ಟ್ರಧ್ವಜ ಮಹಿಳೆಯರಿಂದ ರೂಪುಗೊಳ್ಳುವುದು 'ಸ್ತ್ರೀ ಮತ್ತು ಸ್ವಾತಂತ್ರ್ಯ'ದ ನಡುವೆ ಇರಬಹುದಾದ ಸಂಬಂಧಕ್ಕೆ ಸಂಕೇತವೇ?